ದಿನಾಂಕಃ **20.07.2026** ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್.ಆರ್.ಕೆ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿಸಹಿ ಮಾಡಿರುತ್ತೇನೆ.

ರಾಮಭೋವಿರವರ ಕುಟುಂಬಕ್ಕೆಸಂಬಂಧಿಸಿದ ವಂಶಾವಳಿಯ ಪ್ರಮಾಣ ಪತ್ರ ಮತ್ತು ವಂಶವೃಕ್ಷದ ದೃಡೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-**31** ಮತ್ತು **32** ಎಂದು ಗುರುತಿಸಲಾಯಿತು. ತಿಮ್ಮಯ್ಯ ಅಲಿಯಾಸ್ ತಿಮ್ಮಣ್ಣ ರವರ ಕುಟುಂಬಕ್ಕೆ ಸಂಬಂಧಿಸಿದ ವಂಶಾವಳಿಯ ಪ್ರಮಾಣ ಪತ್ರ ಮತ್ತು ವಂಶವೃಕ್ಷದ ದೃಡೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-**33** ಮತ್ತು **34** ಎಂದು ಗುರುತಿಸಲಾಯಿತು. ರಾಮಕ್ಕ ಮತ್ತು ತಿಮ್ಮಯ್ಯರವರ ಆಧಾರ ಕಾರ್ಡ್ ಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**35** ಮತ್ತು **36** ಎಂದು ಗುರುತಿಸಲಾಯಿತು. ರಾಮಕ್ಕ ಮತ್ತು ತಿಮ್ಮಯ್ಯರವರಿಗೆ ಸಂಬಂಧಿಸಿದ ನಾಲ್ಕು ಚುನಾವಣಾ ಗುರುತಿನ ಚೀಟಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**37** ರಿಂದ ಮತ್ತು **40** ಎಂದು ಗುರುತಿಸಲಾಯಿತು. ರಾಮಕ್ಕ, ತಿಮ್ಮಯ್ಯ, ಗುರಮ್ಮ ಮತ್ತು ನರಸಮ್ಮರವರ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**41** ರಿಂದ **44** ಎಂದು ಗುರುತಿಸಲಾಯಿತು. ದಿಃ04.12.1957 ರ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ--**45** ಎಂದು ಗುರುತಿಸಲಾಯಿತು. ಎಂ.ಆರ್.ನಂ.8/1980-81, ಎಂ.ಆರ್.ನಂ.9/1991-92 ಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**46** ಮತ್ತು **47** ಎಂದು ಗುರುತಿಸಲಾಯಿತು. ಗುರುವಡೆರ ಹಳ್ಳಿ ಗ್ರಾಮದ ಸರ್ವೆ.ನಂಬರ್.5/2 ಕ್ಕೆ ಸಂಬಂಧಿಸಿದ

ಮೂರು ಆರ್.ಟಿ.ಸಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**48** ರಿಂದ **50** ಎಂದು ಗುರುತಿಸಲಾಯಿತು. ಗುರುವಡೆರ ಹಳ್ಳಿ ಗ್ರಾಮದ ಸರ್ವೆ.ನಂಬರ್.5/2 ಎಗೆ ಸಂಬಂಧಿಸಿದಂತೆ ಭೂಮಾಪಕರು ನೀಡಿರುವ ನೋಟಿಸ್, ವರದಿ, ಮತ್ತು ನಕಾಶೆಯನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**51** ರಿಂದ **53** ಎಂದು ಗುರುತಿಸಲಾಯಿತು. ಗುರುವಡೆರ ಹಳ್ಳಿ ಗ್ರಾಮದ ಸರ್ವೆ.ನಂಬರ್.5/2 ಕ್ಕೆ ಸಂಬಂಧಿಸಿದ ಪಟ್ಟಾಪುಸ್ತಕ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**54** ಎಂದು ಗುರುತಿಸಲಾಯಿತು. ದಿಃ23.12.1993 ರ ಜಿ.ಪಿ.ಎನ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**55** ಎಂದು ಗುರುತಿಸಲಾಯಿತು. ರಾಮಕ್ಕರವರಿಗೆ ಸಂಬಂಧಿಸಿದ ಹೊರ ರೋಗಿಯ ವಿವರಗಳ ಎಂಟು ರಸೀದಿಗಳನ್ನು (Prescriptions) ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**56** ರಿಂದ **63** ಎಂದು ಗುರುತಿಸಲಾಯಿತು. ದಿಃ09.08.1991 ರಂದು ಅಕ್ಷತ ಆಸ್ಪತ್ರೆಯವರು ನೀಡಿರುವ ನೋಟಿಸನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**64** ಎಂದು ಗುರುತಿಸಲಾಯಿತು. ದಿಃ07.09.1999 ರ ರಸೀದಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**65** ಎಂದು ಗುರುತಿಸಲಾಯಿತು. ದಿಃ06.08.2004 ರ ಹೊರ ರೋಗಿ ಚೀಟಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-**66** ಎಂದು ಗುರುತಿಸಲಾಯಿತು. ಆರು ಸ್ಕ್ಯಾನಿಂಗ್ ವರದಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**67** ರಿಂದ **72** ಎಂದು ಗುರುತಿಸಲಾಯಿತು. ರಾಮಕ್ಕರವರ ಐದು ಬಿಡುಗಡೆಯ ಸಂಕ್ಷಿಪ್ತ ವರದಿ (Discharge summary) ಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**73** ರಿಂದ **77** ಎಂದು ಗುರುತಿಸಲಾಯಿತು. ರಾಮಕ್ಕರವರ ಹೊರ ರೋಗಿ ಎರಡು ರಸೀದಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-**78** ಮತ್ತು **79** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 2 ರಿಂದ ಪ್ರತಿವಾದಿ ಪರ ಶ್ರೀ ಜಿ.ಕೆ. ವಕೀಲರಿಂದಃ</u>

ಭೂಮಾಪಕರು ಸ್ಥಳ ಪರಿಶೀಲನೆಗೆ ಬಂದಾಗ ಅಕ್ಕ ಪಕ್ಕದ ಜಮೀನಿನವರಿಗೆ ಯಾರಿಗೂ ಸಹ ನೋಟಿಸನ್ನು ನೀಡಿರುವುದಿಲ್ಲ. ನಾವು ಅರ್ಜಿ ನೀಡಿದ್ದ ಕಾರಣ ಭೂಮಾಪಕರು ಸ್ಥಳಕ್ಕೆ ಬಂದು ಅಳತೆ ಮಾಡಿರುತ್ತಾರೆ. ಆದರೆ ಸ್ಥಳಕ್ಕೆ ಬಂದಿದ್ದ ಭೂಮಾಪಕರ ಹೆಸರನ್ನು ಹೇಳಲು ಆಗುವುದಿಲ್ಲ. ಭೂಮಾಪಕರು ಸ್ಥಳ ಪರಿಶೀಲನೆಗೆ ಬಂದಾಗ ಪಹಣಿಯಲ್ಲಿ ಸಂಪೂರ್ಣ ಜಮೀನು ಎನ್.ಎ ಕರಾಬು ಎಂದು ನಮೂದಾಗಿತ್ತು ಎಂದು ವರದಿಯಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರ ನಂ11 ರಲ್ಲಿ ನಮೂದು ಮಾಡಿರುವ ಉಪವಿಭಾಗಾಧಿಕಾರಿಗಳ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

2. 1 ನೇ ಪ್ರತಿವಾದಿ ಮತ್ತು ರಾಮಕ್ಕ ವಿಶ್ವಾಸದಿಂದ ಇದ್ದರು ಮತ್ತು 1 ನೇ ಪ್ರತಿವಾದಿ ರಾಮಕ್ಕರವರಿಗೆ ಸಹಾಯ ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ದಿಃ22.03.2004 ರಲ್ಲಿ ರಾಮಕ್ಕ ಮತ್ತು 1 ನೇ ಪ್ರತಿವಾದಿ ಒಬ್ಬರಿಗೊಬ್ಬರು ಮಾತಾನಾಡಿಕೊಳ್ಳುತ್ತಿರಲಿಲ್ಲ. ಪುಟ್ಟತಿಮ್ಮಯ್ಯ ಹೂಡಿದಂತಹ ದಾವೆಯಲ್ಲಿ ಈ ಪ್ರಕರಣದ 1 ನೇ ಪ್ರತಿವಾದಿ ದಾವಾ ಸರ್ವೆ.ನಂಬರ್ ಜಮೀನಿನಲ್ಲಿ ಮಾಡಿರುವಂತಹ ನಿವೇಶನಗಳನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ರಾಮಕ್ಕ ನನಗೆ ಯಾವುದೇ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದು ನಮ್ಮ ಅಜ್ಜಿ ರಾಮಕ್ಕರವರ ಪರವಾಗಿ ಸಾಕ್ಷಿ ನುಡಿದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-53 ರಲ್ಲಿ ನಮೂದು ಮಾಡಿರುವ ಸರ್ವೆ.ನಂಬರ್.5/2 ಬಿ ಪುಟ್ಟತಿಮ್ಮಯ್ಯರವರಿಗೆ ಸೇರಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ನಿಪಿ-53 ರಲ್ಲಿ ನಮೂದು ಮಾಡಿರುವ ಸರ್ವೆ.ನಂಬರ್.5/2 ಬಿ ಯನ್ನು ಸೇರಿಸಿ ಈ ದಾವೆಯನ್ನು ಹೂಡಿರುತ್ತೇವೆ. ವಾದ ಪತ್ರದಲ್ಲಿ ಸರ್ವೆ.ನಂಬರ್.5/2 ಬಿ ಯನ್ನು ಬಿಟ್ಟು ದಾವೆಯನ್ನು ಹೂಡಿರುತ್ತೇವೆ ಎಂದು ನಮೂದು ಮಾಡಿಸಿರುತ್ತೀರ ಎಂದು ಸೂಚಿಸಿದ್ದಕ್ಕೆ ಸಾಕ್ಷಿ

ನಾವು ಯಾವುದನ್ನು ಮಾರಿರುವುದಿಲ್ಲ ಎಲ್ಲಾ ಜಮೀನಿಗೆ ದಾವೆ ಹಾಕಿರುತ್ತೇವೆ ಎಂದು ಉತ್ತರಿಸುತ್ತಾರೆ.

3. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವಂತೆ ಉಪವಿಭಾಗಾಧಿಕಾರಿಗಳು ದಾವಾ ಸರ್ವೆ.ನಂಬರ್ ಜಮೀನನ್ನು ಅಳತೆ ಮಾಡಲು ಯಾವುದೇ ಆದೇಶ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾವು ಭೂಮಾಪಕರೊಂದಿಗೆ ಶಾಮಿಲ್ ಆಗಿ ನಿಪಿ-51 ರಿಂದ 53 ನ್ನು ಸ್ಥಳಕ್ಕೆ ಭೇಟಿ ನೀಡಿದೆ ನಮ್ಮ ಅನುಕೂಲಕ್ಕೆ ತಯಾರಿಸಿಕೊಂಡು ಹಾಜರುಪಡಿಸಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಪ್ರಸ್ತುತ ಸರ್ವೆ.ನಂಬರ್.5/2 ರಲ್ಲಿ ಸಾಗುವಳಿ ಮಾಡುವ ಜಮೀನು ಇರುವುದಿಲ್ಲ ಮತ್ತು ಸದರಿ ಜಮೀನಿನಲ್ಲಿ ಸಂಪೂರ್ಣವಾಗಿ ನಿವೇಶನಗಳು ಆಗಿರುತ್ತವೆ ಎಂದು ಸೂಚಿಸುವುದು ಸರಿಯಲ್ಲ.

4. ದಾವಾ ಸ್ವತ್ತು ಹೆದ್ದಾರಿಯ ಪಕ್ಕದಲ್ಲಿ ಇರುವ ಕಾರಣ ಮಾರುಕಟ್ಟೆಯ ಬೆಲೆ ಹೆಚ್ಚಾಗಿರುತ್ತದೆ ಎಂದು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ

**1 ನೇ ಪ್ರತಿವಾದಿಯ ಪರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ